ಈ) ಹೌದು, ಅಂದಿನ ನಿಯಮಾನುಸಾರ ರೀತಿ ರೂ. 3.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಉ) ಯಾವುದೇ ಕಾಲಮಿತಿಯನ್ನು ನಿಗಧಿಪಡಿಸಿರುವುದಿಲ್ಲ.

ರಾಜ್ಯದ ಹಿಂದುಳಿದ ವರ್ಗದ ಮಹಿಳೆಯರ ವೃತ್ತಿ ತರಬೇತಿಯ ಕೌಶಲ್ಯ ಯೋಜನೆ ಬಗ್ಗೆ

4627 (5379) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಡತನದಲ್ಲಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಮಹಿಳೆಯರಿಗೆ ವೃತ್ತಿ ತರಬೇತಿ ನೀಡಲು ಕೌಶಲ್ಯ ಎನ್ನುವ ಯೋಜನೆಯನ್ನು ಜಾರಿಗೆ ತರಲಾಗಿದೆಯೇ?

ಆ) ಎಷ್ಟು ಜನರಿಗೆ ಈ ಯೋಜನೆಯಡಿ ತರಬೇತಿ ನೀಡಲಾಗುವುದು?

ಇ) ಜಿಲ್ಲಾವಾರು ನಿರ್ದಿಷ್ಟಪಡಿಸಲಾದ ಗುರಿ ಎಷ್ಟು?

ಈ) ಯೋಜನೆಯಡಿ ತರಬೇತಿಗಾಗಿ ಆಯ್ಕೆ ಮಾಡುವ ವಿಧಾನ ಹೇಗೆ?

ಉ) ಇದಕ್ಕಾಗಿ ಸರ್ಕಾರ ನಿಗಧಿಪಡಿಸಿದ ಮೊತ್ತ ಎಷ್ಟು; ಜಿಲ್ಲಾವಾರು ಹಂಚಿಕೆ ಮಾಡಿದ ಅನುದಾನ ಎಷ್ಟು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಹೌದು, 2003–04ನೇ ಸಾಲಿನಿಂದ ಜಾರಿಗೆ ತರಲಾಗಿದೆ.

ಆ)

ಸಮಾಜ ಇಲಾಖೆ	ಕಲ್ಯಾಣ	4000 ಲಕ್ಷ
ಪರಿಶಿಷ್ಟ ಇಲಾಖೆ	ವರ್ಗಗಳ	10000 ಲಕ್ಷ
ಹಿಂದುಳಿದ ಇಲಾಖೆ	ವರ್ಗಗಳ	50000 ಲಕ್ಷ

ಇ) ಮತ್ತು ಈ)

ಯೋಜನೆಗಳ ಗುರಿ ಮತ್ತು ಅಭ್ಯರ್ಥಿಗಳ ಆಯ್ಕೆ ವಿಧಾನವನ್ನು ಅಂತಿಮಗೊಳಿಸಲಾಗುತ್ತಿದೆ. ಜಿಲ್ಲಾವಾರು ಹಂಚಿಕೆಯನ್ನು ಮಾಡಲಾಗಿಲ್ಲ. ಯೋಜನೆಗೆ ನಿಗಧಿಪಡಿಸಿದ ಮೊತ್ತ ಈ ಕೆಳಕಂಡಂತಿದೆ :

ಸಮಾಜ ಇಲಾಖೆ	ಕಲ್ಯಾಣ	400.00 ಲಕ್ಷ
ಪರಿಶಿಷ್ಟ ಇಲಾಖೆ	ವರ್ಗಗಳ	100.00 ಲಕ್ಷ
ಹಿಂದುಳಿದ ಇಲಾಖೆ	ವರ್ಗಗಳ	500.00 ಲಕ್ಷ

ಬೆಳ್ತಂಗಡಿ ತಾಲ್ಲೂಕು ಪ್ರದೇಶವನ್ನು "ಬಿಳಿ" ಪ್ರದೇಶವೆಂದು ಘೋಷಿಸಿರುವ ಬಗ್ಗೆ

4628 (5067) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ಪ್ರದೇಶವನ್ನು ಹಿಂದೆ ಬೂದು ಪ್ರದೇಶವೆಂದು ಘೋಷಿಸಿದ್ದು, ಈಗ ಬಿಳಿ ಪ್ರದೇಶವೆಂದು ಘೋಷಿಸಿರುವುದು ನಿಜವಲ್ಲವೇ;

ಆ) ಬೂದು ಪ್ರದೇಶವೆಂದು ಘೋಷಿಸಿದ್ದಲ್ಲಿ, ವಿದ್ಯುತ್ ಸಂಪರ್ಕಕ್ಕಾಗಿ ಕೊಳವೆ ಅಥವಾ ತೆರೆದ ಬಾವಿಗಳಿಗೆ ಇದ್ದ ನಿರ್ಬಂಧವನ್ನು ತೆಗೆದು ಹಾಕಲಾಗಿದೆಯೇ;

ಇ) ಹಾಗಿದ್ದಲ್ಲಿ, ವಿದ್ಯುತ್ ಸಂಪರ್ಕವನ್ನು ನೀಡುವಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು)

ಅ) ಇಲ್ಲ.

ಬೆಳ್ತಂಗಡಿ ತಾಲ್ಲೂಕನ್ನು 1994ರ ಅಂತ್ಯಕ್ಕೆ ಅಂತರ್ಜಲ ಮೌಲೀಕರಣ ಮಾಡಿ ವರದಿಯನ್ನು ಪ್ರಕಟಪಡಿಸಿದ ಪ್ರಕಾರ, ಆ ತಾಲ್ಲೂಕನ್ನು 'ಬೂದು' ಪ್ರದೇಶವೆಂದು ಘೋಷಿಸಿರುವುದು ಪ್ರಸ್ತುತದವರೆಗೆ ಜಾರಿಯಲ್ಲಿರುತ್ತದೆ. ಆದರೆ, 1999ರ ಅಂತ್ಯಕ್ಕೆ ಮೌಲೀಕರಣ ಮಾಡಿ ವರದಿಯನ್ನು ತಯಾರಿಸಲಾಗುತ್ತಿದೆ. ಮೌಲೀಕರಣ ಮಾಡಿದ ಅಂಕಿ ಅಂಶಗಳ ವಿವರಗಳ ಪ್ರಕಾರ, ಬೆಳ್ತಂಗಡಿ ತಾಲ್ಲೂಕು 'ಬೂದು' ಪ್ರದೇಶವೆಂದು ವರ್ಗೀಕರಣ ಮಾಡಿರುವ ಪಟ್ಟಿಯಿಂದ ತೆರವಾಗುವ ಸಂಭವವಿದೆ ಎಂದು ತಿಳಿದು ಬಂದಿದೆ.

ಆ) ಬೂದು ಪ್ರದೇಶದ ಪಟ್ಟಿಯಿಂದ ತೆರವಾದ ನಂತರ ವಿದ್ಯುತ್ ಸಂಪರ್ಕಕ್ಕಾಗಿ ಇರುವ ನಿರ್ಬಂಧವನ್ನು ತೆಗೆದು ಹಾಕಲಾಗುವುದು.

ಇ) ಈ ಪ್ರದೇಶವು ಬೂದು ವಿನಿಂದ 'ಬಿಳಿ' ಪ್ರದೇಶಕ್ಕೆ ವರ್ಗಾವಣೆಯಾದ ನಂತರ ವಿದ್ಯುತ್ ಸಮಪರ್ಕವನ್ನು ನೀಡಲಾಗುವುದು.

ರಾಜ್ಯದಲ್ಲಿ ಮಂಡಲ್ ಆಯೋಗದ ವರದಿ ಮೇರೆಗೆ ಹಿಂದುಳಿದ ಜಾತಿಗಳ ಸೇರ್ಪಡೆ

4629 (5170) : ಶ್ರೀ ರವೀಂದ್ರನಾಥ್ ಎಸ್.ಎ (ಮಾಯಕೊಂಡ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಂಡಲ್ ಆಯೋಗದ ವರದಿ ಮೇರೆಗೆ ಯಾವ ಯಾವ ಹಿಂದುಳಿದ ಜಾತಿಗಳನ್ನು ಸೇರ್ಪಡೆಗೊಳಿಸಲಾಗಿದೆ; (ಪಟ್ಟಿಲಗತ್ತಿಸುವುದು) ಮತ್ತು ಮಂಡಲ್ ಆಯೋಗದ ಜಾರಿಯ ಆದೇಶ ಪ್ರತಿ ನೀಡುವುದು;

ಆ) ಸದರಿ ಪಟ್ಟಿಯಲ್ಲಿಲ್ಲದ ಮತ್ತು ಇನ್ನೂ ಈ ಪಟ್ಟಿಗೆ ಸೇರಿಸಬೇಕಾಗಿರುವ ಬೇರೆ ಜಾತಿ ಅಥವಾ ಪಂಗಡಗಳಿವೆಯೇ; (ಜಿಲ್ಲಾವಾರು ವಿವರ ನೀಡುವುದು);

ಇ) ಹಾಗಿದ್ದಲ್ಲಿ, ಯಾವಾಗ ಈ ಸಲಹೆ ಪರಿಗಣಿಸಲಾಗುತ್ತದೆ; (ವಿವರ ಒದಗಿಸುವುದು);

ಈ) ಈ ನಿಟ್ಟಿನಲ್ಲಿ ಮೀಸಲಾತಿ ಪ್ರಮಾಣ ಎಷ್ಟು ಒದಗಿಸಲಾಗಿದೆ; ಉದ್ಯೋಗಕ್ಕೆ ವ್ಯಾಸಂಗಕ್ಕೆ ಪ್ರತ್ಯೇಕವಾದ ಶೇಕಡಾವಾರು ಅಂಕಿಅಂಶ ವಿವರ ಒದಗಿಸುವುದು;

ಉ) ಹಿಂದುಳಿದ ವರ್ಗ ಪಂಗಡಗಳ ಪ್ರವರ್ಗ 2ಎದಲ್ಲಿ ಬರುವ ಹೆಚ್ಚಿನ ಜನಸಂಖ್ಯೆಯುಳ್ಳ ಬಸವ ಸಮುದಾಯದವರ ಮಧ್ಯೆ ಅತ್ಯಲ್ಪ ಪ್ರಮಾಣದ (ಕಡಿಮೆ ಜನಸಂಖ್ಯೆ ಹೊಂದಿದ) ಜಾತಿಗಳವರು ಮೀಸಲಾತಿಗೆ ಸ್ಪರ್ಧೆ ಮಾಡಲು ಸಾಧ್ಯವೇ;